ಅಧ್ಯಕ್ಷರು :— ಮಂಡಿಸಲಾಗಿದೆ.

ಅಧ್ಯಕ್ಷರು :— ಈಗ ಬೇರೆ ಡಿಮಾಂಡ್ಸ್‌ಗಳನ್ನು ಮೂವ್ ಮಾಡೋಣವೇ? 1999-2000 ನೇ ಸಾಲಿನ ಈ ಕೆಳಕಂಡ ಅನುದಾನ ಬೇಡಿಕೆಗಳ ಮೇಲೆ ಚರ್ಚೆ ಹಾಗೂ ಮತಕ್ಕೆ ಹಾಕುವುದು.

(7) ಮಾಜಿ ಪಟೇಲ್‌ರುಗಳಿಗೆ ಅನುಕಂಪ ಭತ್ಯೆ ಬಗ್ಗೆ

ಅಧ್ಯಕ್ಷರು :— ಮಾನ್ಯ ಉಪಮುಖ್ಯಮಂತ್ರಿಯವರೇ, ಆಗಲೇ ಮಾನ್ಯ ಮುಖ್ಯಮಂತ್ರಿಯವರು ಈ ಸಭೆಯಲ್ಲಿ ಇದ್ದರು. ಅವರನ್ನು ಕೇಳಿದ್ದರೆ ಅವರೇ ಉತ್ತರ ಕೊಡುತ್ತಿದ್ದರು, ಅವರು ಹೊರಟುಹೋದರು. ಅವರ ಪರವಾಗಿ ನೀವೇ ಉತ್ತರ ಕೊಟ್ಟುಬಿಡಿ. ಮಾಜಿ ಪಟೇಲರುಗಳು ಇದ್ದಾರಲ್ಲಾ. ಅವರ ಪರಾಪ್ತಿದಾರರು ಇದ್ದಾರಲ್ಲಾ, ಅವರಿಗೆ ಮಾತ್ರ ಅನುಕಂಪ ಭತ್ಯವನ್ನು ಕೊಡುತ್ತಾರೆ. ಯಾರು ಗುಮಾಸ್ತೆ ಪಟೇಲರು ಇದ್ದರು ಅವರಿಗೆ ಅನುಕಂಪ ಭತ್ಯ ಕೊಡುತ್ತಿಲ್ಲ. ಅವರಲ್ಲಿ ನೂರರಲ್ಲಿ 75 ಭಾಗ ಸತ್ತು ಹೋಗಿದ್ದಾರೆ, ಉಳಿದಿರುವವರು ಇನ್ನು 25 ಭಾಗ ಮಾತ್ರ. ಅದೆಲ್ಲಾ ಸೇರಿದರೆ 25-30 ಲಕ್ಷ ರೂ ಬರಬಹುದು. ಇದು ಇಡೀ ರಾಜ್ಯಕ್ಕೆಲ್ಲಾ ಅನ್ವಯಿಸುತ್ತದೆ. ಇಲ್ಲಿ ಪ್ರಸ್ತಾವ ಮಾಡಿದಾಗ ಮಾನ್ಯ ಮುಖ್ಯಮಂತ್ರಿಯವರು ಈ ಬಗ್ಗೆ ಒಪ್ಪಿಕೊಂಡು ಹೋದರು. ಇದರ ಬಗ್ಗೆ ಉತ್ತರ ಆಮೇಲೆ ಹೇಳುತ್ತೀರೇನು?

ಶ್ರೀ ಸಿದ್ಧರಾಮಯ್ಯ :— ಹಣಕಾಸಿನ ಪರಿಸ್ಥಿತಿ ಏನಿದೆ ಅದನ್ನೆಲ್ಲಾ ನೋಡಿಬಿಟ್ಟು ಹೇಳುತ್ತೇನೆ.

ಅಧ್ಯಕ್ಷರು :— ಏನು, ಪಾಪ ಅವರು ಇರುವುದೇ ಕಡಿಮೆ ಸಂಖ್ಯೆಯಲ್ಲಿ 1978ನೇ ಇಸವಿಗೆ ಇಡೀ ರಾಜ್ಯವೆಲ್ಲಾ ಸೇರಿದರೆ ಸಾವಿರ ಜನ ಕೂಡ ಆಗುವುದಿಲ್ಲ. ಇದರ ಬಗ್ಗೆ ಸಾಯಂಕಾಲ ಉತ್ತರ ಹೇಳುತ್ತೀರಾ?

ಶ್ರೀ ಸಿದ್ಧರಾಮಯ್ಯ :— ಸಾಯಂಕಾಲ ಈ ಬಗ್ಗೆ ಉತ್ತರ ಹೇಳುತ್ತೇನೆ.

ಶ್ರೀ ಎನ್. ಯೋಗೀಶ್ ಭಟ್ :— ಮಾನ್ಯ ಅಧ್ಯಕ್ಷರೆ, ಉತ್ತರ ಕನ್ನಡ ಜಿಲ್ಲೆಯ ಪಟೇಲರಿಗೆ ಸಹ ಯಾವುದೇ ರೀತಿಯ ಸಹಾಯ ದೊರೆಯುತ್ತಿಲ್ಲ.

ಅಧ್ಯಕ್ಷರು :— ನಾನು ಕೇಳಿದ್ದು ಇಡೀ ರಾಜ್ಯಕ್ಕೆ ಏನಪ್ಪ ನೀವು? ನಾನೇನೂ ಪಟೇಲನೂ ಅಲ್ಲ, ಶ್ಯಾನುಭೋಗನೂ ಅಲ್ಲ.

ಶ್ರೀ ಮಲ್ಲಿಕಾರ್ಜುನ ಖರ್ಗೆ :— ಮಾನ್ಯ ಜೆ.ಹೆಚ್. ಪಟೇಲರು ಈ ಕ್ಯಾಟಗರಿಯಲ್ಲಿ ಬರುತ್ತಾರೇನು? ಅವರಿಗೂ ಪೆನ್‌ಷನ್ ಕೊಡುತ್ತೀರಾ?

ಅಧ್ಯಕ್ಷರು :— ಅವರು ಈ ಕ್ಯಾಟಗರಿಯಲ್ಲಿ ಬರುವುದಿಲ್ಲ. ಅವರದು ಬೇರೆ ಕ್ಯಾಟಗರಿ ಇದೆ. ಆಮೇಲೆ ನಾನು ಈ ಸದನದಲ್ಲಿ ಅನೌನ್ಸ್ ಮಾಡುತ್ತೇನೆ. ಮಾನ್ಯ ಶ್ರೀರಾಮರೆಡ್ಡಿಯವರೇ, ತಾವು ಬೇಡಿಕೆಗಳ ಮೇಲೆ ತಮ್ಮ ಭಾಷಣ ಮುಂದುವರಿಸಿ ನೀವು 20 ನಿಮಿಷ ಮಾತನಾಡಿ. 2 ಗಂಟೆಗೆ ಈ ಸಭೆಯನ್ನು ಅಡ್ಜರ್ನ್ ಮಾಡೋಣ.

(8) 1999-2000ನೇ ಸಾಲಿನ ಅನುದಾನ ಬೇಡಿಕೆಗಳ ಮೇಲೆ ಮುಂದುವರೆದ ಚರ್ಚೆ ಹಾಗೂ ಮತಕ್ಕೆ ಹಾಕುವುದು.

+ ಶ್ರೀ ಜಿ.ವಿ. ಶ್ರೀರಾಮರೆಡ್ಡಿ (ಬಾಗೇಪಲ್ಲಿ) :— ಮಾನ್ಯ ಅಧ್ಯಕ್ಷರೆ, ನಾನು ನಿನ್ನೆ ಕೃಷಿ ಬೇಡಿಕೆಯ ಮೇಲೆ ಚರ್ಚೆ ಮಾಡುತ್ತಾ, ಅರ್ಧಕ್ಕೇ ನಿಲ್ಲಿಸಿದ್ದೆ. ಮಾನ್ಯ ಬೈರೇಗೌಡರು ಹೊಸ ಕೃಷಿ ನೀತಿಯನ್ನು ಈ ರಾಜ್ಯದಲ್ಲಿ ಮಂಡಿಸತಕ್ಕ ಸಂದರ್ಭದಲ್ಲಿ ಅವರು ಹಲವಾರು ಹೊಸ ವಿಷಯಗಳನ್ನು ಇದರಲ್ಲಿ ತಂದಿದ್ದಾರೆ. ಹೊಸ ಕೃಷಿ ನೀತಿಯನ್ನು ಏನು ತಂದಿದ್ದಾರೆ, ಆ ಹೊಸ ವಿಷಯಗಳಲ್ಲಿ ಬಿತ್ತನೆ ಬೀಜ ಮಾರುಕಟ್ಟೆ ಸುಧಾರಣೆ ಮತ್ತು ರಫ್ತು ಮಾಡತಕ್ಕ ಅಂಶಗಳನ್ನೂ ಕೂಡ ಇದರಲ್ಲಿ ತಂದಿದ್ದಾರೆ. ಅವರು ಬಿತ್ತನೆ ಬೀಜ ಮತ್ತು ಗಿಡಗಳನ್ನು ಹಂಚುವುದರಲ್ಲಿ, ಸೀಡಲಿಂಗ್ ಮಾಡತಕ್ಕಂಥ ವ್ಯವಸ್ಥೆಯಲ್ಲಿ ಎಷ್ಟು ಅಚಾತುರ್ಯ ಮತ್ತು ದುರುಪಯೋಗವಾಗಿದೆ ಎಂದು ಹೇಳಿದರೆ ಒಂದು ಕೋಟಿ

(ಶ್ರೀ ಹಾಗೋಡು ತಿಮ್ಮಪ್ಪನವರು) ಅಧ್ಯಕ್ಷ ಪೀಠದಲ್ಲಿ ಉಪಸ್ಥಿತರಾದರು)

ಇಪ್ಪತ್ತು ಲಕ್ಷ ರೂಪಾಯಿ ನಷ್ಟವಾಗಿದೆ. ಏಕೆಂದರೆ 3.5 ಸೀಡಲಿಂಗ್ ಮಾಡತಕ್ಕಂಥ ಸಂದರ್ಭದಲ್ಲಿ ಇಷ್ಟು ವೇಸ್ಟ್ ಆಗಿದೆ. ಯಾವ ರೀತಿ ವೇಸ್ಟ್ ಆಗಿದೆ ಎಂದು ಹೇಳಿದರೆ-

> ``According to the Project Director, oil palm seedlings were fit for planting within 14 months of its raising. It was noticed that out of 13.64 lakh oil palm seedlings raised in 19 departmental nurseries during the period 1992-93 to 1996-97, 3.05 lakh seedlings raised at a cost of Rs.1.28 crores upto March 1997 remained unutilised as of March 1998."

ಹೀಗಾಗಿ ಒಂದು ಕೋಟಿ ಇಪ್ಪತ್ತೆಂಟು ಲಕ್ಷ ರೂಪಾಯಿಗಳಷ್ಟು ಈ ಸೀಡಲಿಂಗ್ ಮಾಡತಕ್ಕಂಥಾದ್ದರಲ್ಲಿ ನಷ್ಟವಾಗಿದೆ. ಮಾನ್ಯ ಬೈರೇಗೌಡರು ಬಹಳ ಆಯಂಬಿಷಿಯನ್ ಆಗಿ ಆಶಾದಾಯಕವಾಗಿ ಮಾಡಿದಂಥ ಒಂದು ಯೋಜನೆ ಇದು. ಇದೇ ರೀತಿಯಲ್ಲಿ ಬೀಜಗಳ ರಕ್ಷಣೆ ಎನ್ನತಕ್ಕಂಥಾದ್ದರಲ್ಲಿ ಹೊಸ ವ್ಯವಸಾಯ ಕೃಷಿ ಪದ್ಧತಿಯನ್ನು ಜಾರಿಗೆ ತರತಕ್ಕಂಥ ಸಂದರ್ಭದಲ್ಲಿ ಅವರು ಡ್ರಿಪ್ ಇರಿಗೇಷನ್ ಮಾಡುತ್ತೇವೆ ಎಂದು ಹೇಳಿದರು. ಇದು ಮಾನ್ಯ ಬೈರೇಗೌಡರ ಒಂದು ಕನಸಿನ ಕೂಸು. ಇಸ್ರೇಲ್‌ಗೆ ಹೋಗಿಬಂದು ಡ್ರಿಪ್